ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ-

ವಿ.ಆರ್. ಅಸೆಸ್ಮೆಂಟ್ ಅನ್ನು ನಿಪಿ-7 ಎಂದು, ಒಂದು ವೈದ್ಯರ ಸಲಹಾ ಚೀಟಿಯನ್ನು ನಿಪಿ-8 ಎಂದು, 23 ವೈದ್ಯಕೀಯ ಬಿಲ್ಲುಗಳನ್ನು ಹಾಜರುಮಾಡಿದ್ದು ಅವುಗಳನ್ನು ಒಟ್ಟಾಗಿ ನಿಪಿ-9 ಎಂದು ಗುರುಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ದಿನಕ್ಕೆ 300 ರಿಂದ 400 ರೂಪಾಯಿ ಸಂಪಾದನೆ ಮಾಡುತ್ತೇನೆ. ನನ್ನ ಆಧಾರ್ ಕಾರ್ಡ್ ಪ್ರಕಾರ ನನ್ನ ಜನ್ಮ ದಿನಾಂಕ 01.01.1967 ಎಂದರೆ ಸಾಕ್ಷಿ ಯಾರು ಹಾಗೆ ಬರೆಸಿದ್ದಾರೆ ಎಂದು ನುಡಿಯುತ್ತಾರೆ. ನನ್ನ ವಯಸ್ಸನ್ನು ತೋರಿಸಲು ಯಾವುದೇ ದಾಖಲೆ ಹಾಜುಪಡಿಸಿಲ್ಲ. ಆಧಾರ್ ಕಾರ್ಡ್ ಹೊರತುಪಡಿಸಿ ನನ್ನ ಬಳಿ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ನನ್ನ ಬಳಿ ಡಿ.ಎಲ್ ಇದೆ ಆದರೆ ಅದನ್ನು ನ್ಯಾಯಾಲಯಕ್ಕೆ ಈ ದಿನ ತಂದಿಲ್ಲ. ಡಿ.ಎಲ್ ನಂಬರ್ ನನಗೆ ಗೊತ್ತಿಲ್ಲ, ನನ್ನ ಮೋಟಾರ್ ಸೈಕಲ್ ಗೆ ಯಾವ ಕಂಪನಿಯಿಂದ ವಿಮೆ ತೆಗೆದುಕೊಂಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಅಪಘಾತವಾದ ದಿನ ನಾನು ಹೆಲ್ಮಟ್ ಧರಿಸಿದ್ದೆ. ದೂರಿನಲ್ಲಿ ನಾನು ಹಲ್ಮೆಟ್ ಧರಿಸಿದ್ದೆ ಎಂದು ಹೇಳಿರುತ್ತೇನೆ. ಡಿ.ಎಲ್ ಇಲ್ಲದೇ ವಾಹನವನ್ನು ಚಲಾಯಿಸಿಕೊಂಡು ಹೋಗುವುದು ಕಾನೂನು ಪ್ರಕಾರ ತಪ್ಪು ಎಂದು ನನಗೆ ಗೊತ್ತಿದೆ. ನನ್ನ ವಾಹನದ ಆರ್.ಸಿ. ಡಿ.ಎಲ್ ಮತ್ತು ವಿಮಾ ಪ್ರತಿಯನ್ನು ಆರ್.ಟಿ.ಓ ಕಛೇರಿಯಿಂದ ತಂದು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ಅಪಘಾತ ಮುಖಾಮುಖಿಯಾಗಿರುತ್ತದೆ ಎಂದರೆ ಸರಿಯಲ್ಲ ಸಾಕ್ಷಿ ಮಂದುವರೆದು ನನ್ನ ಎಡಭಾಗದಿಂದ ಬಂದು ಡಿಕ್ಕಿಪಡಿಸಿರುತ್ತದೆ ಎಂದು ನುಡಿಯುತ್ತಾರೆ. ಆ ದಿನ ನನ್ನ ಬಳಿ ಡಿ.ಎಲ್ ಇಲ್ಲದೆ ಹೆಲ್ಮಟ್ ಧರಿಸದೇ ವಾಹನವನ್ನು ಅತೀ ವೇಗ ಮತ್ತು ಅಜಾಗಕರೂತೆಯಿಂದ ಚಲಾನೆ ಮ ಡಿಕೊಂಡು ಬಿದ್ದಿರುತ್ತೇನೆ ಎಂರೆ ಸರಿಯಲ್ಲ. ವಾಹನವನ್ನು ನೋಡಿದಾಗ ಯಾವುದೇ ಜಖಂ ಆಗಿಲ್ಲದೇ ಇರುವ ಕಾರಣ ನಾನು ಹೇಳುವಂತೆ ಅಪಘಾತವಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ವಾಹನಕ್ಕೊ ಜಖಂ ಆಗಿರುತ್ತದೆ. ಅಪಘಾತ ನನ್ನ ತಪ್ಪಿನಿಂದ ಆಗಿರುವ ಕಾರಣ 2ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ನನಗೆ ಶಸ್ತ್ರ ಚಿಕಿತ್ಸೆ ಮಾಡಿಸಿರುವ ಬಗ್ಗೆ ದಾಖಲೆ ಇರುವುದಿಲ್ಲ. ಮನೆಯಿಂದ ಆಸ್ಪತ್ರೆಗೆ ಓಡಾಡಲು ಪ್ರಯಾಣ ವೆಚ್ಚ ಆಷು ಆಗಿರುವುದಿಲ್ಲ ಎಂದರೆ ಸರಿಯಲ್ಲ, ನನಗೆ ಆಸ್ಪತ್ರೆಯಲ್ಲಿ 1 ಲಕ್ಷ ಖರ್ಚಾಗಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಪೊಲೀಸರಿಗೆ ನೀಡಿರುತ್ತೇನೆ. ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ಆಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ಕಾಲಿಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಗಾಯದ ಪ್ರಮಾಣ ಪತ್ರದಲ್ಲಿ ತೋರಿಸಿರುವ ಗಾಯಗಳಿಗೂ ಮತ್ತು ನಾನು ಹೇಳುತ್ತಿರುವ ಗಾಯಗಳಿಗೆ ತಾಳೆಯಾಗುತ್ತಿಲ್ಲದೇ ಇರುವ ಕಾರಣ ನಾನು ಸುಳ್ಳು ಹೇಳುತ್ತಿದ್ದೇ ಎಂದರೆ ಸರಿಯಲ್ಲ. ನಾನು ಹಣ್ಣು ಹಂಪಲು ಮತ್ತು ಇತರೆ ಖರ್ಚು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಪರಿಹಾರ ತೆಗೆದುಕೊಳ್ಳುವ ಉದ್ದೇಶದಿಂದ ನಾನು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು